CW.13 PW.8

**ಅಧಿಕ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ., ಕನಕಪುರ ರವರ ನ್ಯಾಯಾಲಯದಲ್ಲಿ**

# CC No.1494/2017

| | |
|---|---|
| ಸಾಕ್ಷಿದಾರರ ಹೆಸರು | ಈಶ್ವರಪ್ಪ |
| ತಂದೆಯ ಹೆಸರು | ಲೇಟ್ ಎಸ್ ಪರಶಿವಯ್ಯ |
| ವಯಸ್ಸು | 68 ವರ್ಷ |
| ವೃತ್ತಿ | ನಿವೃತ್ತ ಪಿ ಎಸ್ ಐ |
| ವಿಳಾಸ | ಕನಕಪುರ |
| ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕಃ | 04.07.2026 |

**<u>ಮುಖ್ಯ ವಿಚಾರಣೆ ಎ ಪಿ ಪಿ ರವರಿಂದಃ-</u>**

ನಾನು ಆರೋಪಿಯನ್ನು ನೋಡಿರುವುದಿಲ್ಲ.

ನಾನು 03.05.2016 ರಿಂದ 31.01.2018 ರವರೆಗೂ ನಾನು ಕನಕಪುರ ಸಂಚಾರಿ ಪೋಲೀಸ್ ಠಾಣೆಯಲ್ಲಿ ಪಿ ಎಸ್ ಐ ಆಗಿ ನನ್ನ ಕರ್ತವ್ಯವನ್ನು ನಿರ್ವಹಿಸಿರುತ್ತೇನೆ.

ದಿಃ 11.09.2017 ರಂದು ಚಾಸಾ-12 ರವರಿಂದ ಕಡತವನ್ನು ಪಡೆದುಕೊಂಡು ಪರಿಶೀಲನೆ ಮಾಡಿ ನಂತರ ಅದೇ ದಿನ ಸದರಿ ಪ್ರಕರಣದಲ್ಲಿ ಅಮಾನತು ಪಡಿಸಿಕೊಂಡ ವಾಹನಗಳ ಪರೀಕ್ಷೆ ಮಾಡಿ ವರದಿ ಕೊಡುವಂತೆ ಆರ್ ಟಿ ಒ ರವರಿಗೆ ಮನವಿ ಮಾಡಿರುತ್ತೇವೆ. ನಂತರ ಸದರಿ ದ್ವಿಚಕ್ರ ವಾಹನವನ್ನು ಸೂಕ್ತ ಇಂಡಿನಿಟಿ ಬಾಂಡ್ ನೀಡಿದ ಮೇರೆಗೆ ಚಾಸಾ-2 ರವರ ವಶಕ್ಕೆ ಕೊಟ್ಟಿರುತ್ತೇನೆ.

ದಿಃ23.09.2017 ರಂದು ಪ್ರಕರಣದ ಗಾಯಾಳುಗಳಾದ ಚಾಸಾ-3 ಹಾಗೂ ಚಾಸಾ-2 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ದಿಃ31.10.2017 ರಂದು ಸದರಿ ಚಾಸಾ-2 ಮತ್ತು 3 ರವರ ಗಾಯದ ಪ್ರಮಾಣ ಪತ್ರಗಳನ್ನು ಚಾಸಾ-11 ರವರಿಂದ ಪಡೆದುಕೊಂಡಿರುತ್ತೇನೆ. ನಂತರ ಚಾಸಾ-10

ರವರಿಂದ ಐಎಂವಿ ವರದಿಯನ್ನು ಪಡೆದುಕೊಂಡಿರುತ್ತೇನೆ. ನಂತರ ತನಿಖೆ ಪೂರ್ಣಗೊಳಿಸಿ ಅಂತಿಮ ವರದಿ ಸಲ್ಲಿಸಿರುತ್ತೇನೆ.

ಸಾಕ್ಷಿಗೆ ಸದರಿ ಪ್ರಕರಣದ ಎರಡೂ ವಾಹನಗಳ ಇಂಡಿನಿಟಿ ಬಾಂಡ್ ನ್ನು ತೋರಿಸಲಾಗಿ ಅದರಲ್ಲಿ ಸದರಿ ಕೆ ಎಸ್ ಆರ್ ಟಿ ಸಿ ಬಸ್ ಸಂಬಂಧ ನೀಡಿರುವ ಇಂಡಿನಿಟಿ ಬಾಂಡ್ ನ್ನು ಸಾಕ್ಷಿಯು ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-7 ಎಂದು ಆಗಿದ್ದು ಸಾಕ್ಷಿಯ ಸಹಿಯನ್ನು ನಿಪಿ-7(ಬಿ) ಎಂದು ಗುರುತಿಸಲಾಯಿತು. ದ್ವಿಚಕ್ರ ವಾಹನಕ್ಕೆ ಸಂಬಂಧಿಸಿದ ಇಂಡಿನಿಟಿ ಬಾಂಡ್ ನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಈಗ ನಿಪಿ-11 ಎಂದು ಸಾಕ್ಷಿಯ ಸಹಿಯನ್ನು ನಿಪಿ-11(ಎ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ಸದರಿ ಪ್ರಕರಣದ ಚಾಸಾ-2 ಮತ್ತು 3 ರವರ ಗಾಯದ ಪ್ರಮಾಣ ಪತ್ರಗಳನ್ನು ತೋರಿಸಿದ್ದು ಸಾಕ್ಷಿಯು ನೋಡಿ ಗುರುತಿಸಿದ್ದು ಅದನ್ನು ಈಗ ಕ್ರಮವಾಗಿ ನಿಪಿ-12 ಮತ್ತು 13 ಎಂದು ಆಗಿದ್ದು ಸಾಕ್ಷಿಯ ಸಹಿಯನ್ನು ನಿಪಿ-12(ಎ) ಮತ್ತು 13(ಎ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ಸದರಿ ಪ್ರಕರಣದ ಐಎಂವಿ ವರದಿಯನ್ನು ತೋರಿಸಲಾಗಿ ಸಾಕ್ಷಿಯು ನೋಡಿ ಗುರುತಿಸಿದ್ದು ಅದನ್ನು ನಿಪಿ-14 ಎಂದು ಸಾಕ್ಷಿಯ ಸಹಿಯನ್ನು ನಿಪಿ-14(ಎ) ಎಂದು ಗುರುತಿಸಲಾಯಿತು.

ನಿಪಿ-3 ರಿಂದ 5 ಫೋಟೋಗಳನ್ನು ಕಡತವನ್ನು ಪರಿಶೀಲನೆ ಮಾಡುವಾಗ ನೋಡಿರುತ್ತೇನೆ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದ**

ಅಪಘಾತದ ಸಮಯ ಬೆಳಿಗ್ಗೆ 10.15 ಗಂಟೆ ಎಂದು ತೋರಿಸಿದ್ದು ದೂರನ್ನು 4 ಗಂಟೆಗೆ ಕೊಟ್ಟ ಬಗ್ಗೆ ಸದರಿ ವಿಳಂಬದ ಬಗ್ಗೆ ನಾನು ತನಿಖೆ ಮಾಡಿರುವುದಿಲ್ಲ. ನಾನು ಅಪಘಾತ ಸ್ಥಳಕ್ಕೆ ಹೋಗಿರುವುದಿಲ್ಲ. ರಸ್ತೆ ಅಪಘಾತ ಹೇಗೆ ಆಯಿತು ಎಂಬ ಬಗ್ಗೆ ಸೂಕ್ತ ಮಾಹಿತಿ ಇಲ್ಲ ಎಂದರೆ ಸರಿ. ಪ್ರಕರಣದಲ್ಲಿ ಸ್ಥಳ ಮಹಜರ್ ದಾಖಲೆಯಲ್ಲಿ ಸದರಿ ದ್ವಿಚಕ್ರ ವಾಹನದ ಬಲಗಡೆ ಲಿವರ್ ಬಳಿ ಬಸ್ಸಿ ನ ಕೆಂಪು ಬಣ್ಣ ತಾಕೀರುವುದಾಗಿ ಹೇಳಿದ್ದು ಆದರೆ ಐಎಂವಿ ವರದಿಯಲ್ಲಿ ಯಾವುದೇ ರೀತಿಯ ಡ್ಯಾಮೇಜ್ ಕಂಡು

ಬಂದಿರುವುದಿಲ್ಲ ಎಂದು ಹೇಳಿರುತ್ತಾರೆಂದರೆ ಸರಿ. ಸದರಿ ಚಾಸಾ-1 ರವರು ತಮ್ಮ ಅಜಾಗರೂಕತೆಯಿಂದ ಸ್ವಯಂ ಕೃತವಾಗಿ ಅಪಘಾತ ಪಡಿಸಿಕೊಂಡಿದ್ದು ಅಲ್ಲೇ ಹೋಗುತ್ತಿದ್ದ ಕೆ ಎಸ್ ಆರ್ ಟಿ ಸಿ ಬಸ್ಸಿ ನ ಮೇಲೆ ಸುಳ್ಳು ದೂರು ಕೊಟ್ಟಿರುತ್ತಾರೆಂದರೆ ಸರಿಯಲ್ಲ. ಆರೋಪಿ ಸದರಿ ದಿನ ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಲ್ಲ ಆರೋಪಿ ತಪ್ಪಿ ನಿಂದ ಯಾವುದೇ ಅಪಘಾತವಾಗಿರುವುದಿಲ್ಲ ಎಂದರೆ ಸರಿಯಲ್ಲ. ಕೇವಲ ಚಾಸಾ-1 ಹಾಗೂ ಗಾಯಾಳುಗಳಿಗೆ ಪರಿಹಾರ ಬರಲಿ ಎಂಬ ಉದ್ದೇಶದಿಂದ ಸುಳ್ಳು ಅಂತಿಮ ವರದಿ ನೀಡಿರುತ್ತೇನೆಂದರೆ ಸರಿಯಲ್ಲ. ನಾನು ಸೂಕ್ತ ತನಿಖೆ ಮಾಡಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ**

**ಓ ಹೇ ಕೇ ಸರಿ ಇದೆ**

**ಅಧಿಕ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ.,**

**ಕನಕಪುರ .**